ಇಲ್ಲಿನ 13 00 ಎಕರೆ ಜಮೀನಿನ ಪೈಕಿ 3 13 ಎಕರೆಗಳಲ್ಲಿ ಹಿಪ್ಪನೇರಳೆ ಕೃಷಿ ಇದ್ದು ಪಿ3 ಹಂತದ ದ್ವಿತಳಿ ಮೂಲ ತಳಿಯನ್ನು ಅಭಿವೃದ್ಧಿ ಮಾಡುತ್ತಿದ್ದಾರೆ ಇದರಲ್ಲಿ ರೇಷ್ಮೆ ಇಲಾಖೆಯ ಪಾತ್ರ ಇರುವುದಿಲ್ಲ

ಆ) ಇಲ್ಲ

ಇ) ಉದ್ಭವಿಸುವುದಿಲ್ಲ

ದೊಡ್ಡಬಳ್ಳಾಪುರದಲ್ಲಿ ಸಿದ್ದ ಉಡುಪುಗಳ ಪಾರ್ಕ್ ನಿರ್ಮಾಣ

41 (580) ಶ್ರೀ ಕೃಷ್ಣಪ್ಪ ವಿ (ದೊಡ್ಡಬಳ್ಳಾಪುರ) ಮಾನ್ಯ ರೇಷ್ಮೆ, ಜವಳಿ ಹಾಗೂ ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಮತ್ತು ನಾಗರೀಕ ವಿಮಾನಯಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕಳೆದ ಸಾಲಿನ ಆಯವ್ಯಯದಲ್ಲಿ ದೊಡ್ಡಬಳ್ಳಾಪುರದಲ್ಲಿ ಸಿದ್ದ ಉಡುಪುಗಳ ಪಾರ್ಕ್ ಸ್ಥಾಪಿಸಲಾಗುವುದೆಂದು ಹೇಳಿರುವ ಪ್ರಸ್ತಾವ ಈಗ ಯಾವ ಹಂತದಲ್ಲಿದೆ

ಆ) ಇದಕ್ಕಾಗಿ ಎಷ್ಟು ಹಣ ಕಾಯ್ದಿರಿಸಲಾಗಿದೆ? ಯಾವಾಗ ಪ್ರಾರಂಭಿಸಲಾಗುವುದು? (ವಿವರ ನೀಡುವುದು)

ಶ್ರೀ ಹೆಚ್ ಎಂ ರೇವಣ್ಣ (ರೇಷ್ಮೆ, ಜವಳಿ ಹಾಗೂ ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಮತ್ತು ನಾಗರೀಕ ವಿಮಾನಯಾನ ಸಚಿವರು)

ಅ) ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೊಡ್ಡಬಳ್ಳಾಪುರದಲ್ಲಿ ಅಪರೆಲ್ ಪಾರ್ಕ್ ಸ್ಥಾಪಿಸಲು ಉದ್ದೇಶಿಸಿದ್ದು ಇದಕ್ಕೆ ಕೆಂದ್ರ ಸರ್ಕಾರ ಅನುಮೋದನೆ ನೀಡಿರುತ್ತದೆ ಆ ಯೋಜನೆಯನ್ನು ಅನುಷ್ಟಾನಗೊಳಿಸುವ ದಿಸೆಯಲ್ಲಿ ದೊಡ್ಡಬಳ್ಳಾಪುರದಲ್ಲಿ 187 ಎಕರೆ ಜಮೀನನ್ನು ಕೆ ಐ ಡಿ ಬಿ ಮುಖಾಂತರ ಸ್ವಾಧೀನ ಪಡಿಸಿಕೊಳ್ಳಲಾಗುತ್ತಿದೆ

ಆ) ಇದಕ್ಕಾಗಿ 2002–03 ನೇ ಸಾಲಿನಲ್ಲಿ ರೂ 450 00 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದ್ದು 2003–04ನೇ ಸಾಲಿನಲ್ಲಿ ರೂ 520 00 ಲಕ್ಷಗಳನ್ನು ಆಯವ್ಯಯದಲ್ಲಿ ಒದಗಿಸಲಾಗಿದೆ 2004ರ ಅಂತ್ಯದ ವೇಳೆಗೆ ಪಾರ್ಕ್ ಚಟುವಟಿಕೆಗಳನ್ನು ಪ್ರಾರಂಭಿಸಲಾಗುವುದು

ಸ್ಥಳೀಯ ಕೈಗಾರಿಕೆಗಳಿಗೆ ಬಂಡವಾಳ

42 (570) ಶ್ರೀ ಗುರುಸ್ವಾಮಿ ಎ ಎಸ್ (ಚಾಮುಂಡೇಶ್ವರಿ) ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕಳೆದ 2 ವರ್ಷಗಳಿಂದ ಎಷ್ಟು ವಿದೇಶಿ ಕಂಪೆನಿಗಳು ಬಂಡವಾಳ ಹೂಡಿದೆ, ಮೊತ್ತವೆಷ್ಟು,

ಆ) ಸ್ಥಳೀಯ ಕೈಗಾರಿಕೆಗಳನ್ನು ಪ್ರೋತ್ಸಾಹಿಸಲು ವಿದೇಶಿ ಕಂಪೆನಿಗಳು ನೆರವನ್ನು ನೀಡಿದೆಯೇ, ಯಾವ ಪ್ರಮಾಣದಲ್ಲಿ

ಇ) ಯಾವ ಯಾವ ವಲಯಕ್ಕೆ ವಿದೇಶಿ ಕಂಪೆನಿಯವರು ಬಂಡವಾಳವನ್ನು ಒದಗಿಸಿದ್ದಾರೆ, ಮೊತ್ತವೆಷ್ಟು

ಈ) ವಿದೇಶಿ ಬಂಡವಾಳವನ್ನು ತರುವಲ್ಲಿ ಕರ್ನಾಟಕದ ಕಾನೂನುಗಳ ತೊಡಕೇನಾದರೂ ಇದೆಯೇ ಇದ್ದ ಪಕ್ಷದಲ್ಲಿ ಯಾವ ರೀತಿಯ ಕ್ರಮವನ್ನು ಜರುಗಿಸಿದ್ದೀರಿ,

ಉ) ವಿದೇಶಿ ಬಂಡವಾಳವನ್ನು ತರುವಾಗ ಭಾರತೀಯ ಕಾನೂನುಗಳು ಉಲ್ಲಂಘನೆಯಾಗಿದೆಯೇ ಉಲ್ಲಂಘನೆಯಾಗಿರುವ ಕಾನೂನುಗಳ ಯಾವುವು?

ಶ್ರೀ ಆರ್ ವಿ ದೇಶಪಾಂಡೆ (ಬೃಹತ್ ಮತ್ತು ಮಾಧ್ಯಮ ಕೈಗಾರಿಕೆ ಸಚಿವರು)

ಅ) ಕಳೆದ ಎರಡು ವರ್ಷಗಳಲ್ಲಿ 610 ವಿದೇಶಿ ಕಂಪೆನಿಗಳು ಒಟ್ಟು ರೂ 3104.83 ಕೋಟಿಗಳಷ್ಟು ಬಂಡವಾಳವನ್ನು ರಾಜ್ಯದಲ್ಲಿ ಹೂಡಲು ಅನುಮೋದನೆ ಪಡೆದಿದೆ

	ಸಂಖ್ಯೆ	ಬಂಡವಾಳ (ಕೋಟಿ ರೂ.ಗಳಲ್ಲಿ)
2001–02	320	820 20
2002–03	290	2283 83
	610	3104 03

ಆ) ವಿದೇಶಿ ಕಂಪೆನಿಗಳ ಬಂಡವಾಳ ಹೂಡಿಕೆಯಿಂದ ರಾಜ್ಯದಲ್ಲಿ ಪೂರಕ ಉದ್ದಿಮೆಗಳ ಸ್ಥಾಪನೆಗೆ ಅನುಕೂಲವಾಗುವುದು

ಇ) ಮಾಹಿತಿ ತಂತ್ರಜ್ಞಾನ, ಇಂಜಿನಿಯರಿಂಗ್ ಉದ್ಯಮ, ಆಟೋಮೋಬೈಲ್ ಜವಳಿ ಆಹಾರ ಪರಿಷ್ಕರಣೆ ರಾಸಾಯನಿಕ ಹಾಗೂ ಇತರೆ ವಲಯಗಳಲ್ಲಿ ಕಳೆದ ಎರಡು ಸಾಲಿನಲ್ಲಿ ಒಟ್ಟು ರೂ 3104 83 ಕೋಟಿಗಳಷ್ಟು ಬಂಡವಾಳವನ್ನು ರಾಜ್ಯದಲ್ಲಿ ಹೂಡಲು ಅನುಮೋದನೆ ಪಡೆದಿದೆ

ಈ) ವಿದೇಶಿ ಬಂಡವಾಳವನ್ನು ತರುವ ಬಗ್ಗೆ ಕರ್ನಾಟಕ ಕಾನೂನುಗಳಿಂದ ಯಾವುದೇ ತೊಂದರೆ ಇರುವುದಿಲ್ಲ

ಉ) ವಿದೇಶಿ ಬಂಡವಾಳ ತರುವಾಗ ಭಾರತೀಯ ಕಾನೂನುಗಳ ಉಲ್ಲಂಘನೆಯಾದ ಯಾವ ಪ್ರಕರಣವು ವರಿದಿಯಾಗಿರುವುದಿಲ್ಲ

ರಾಜ್ಯದಲ್ಲಿ ಸಿದ್ದ ಉಡುಪುಗಳ ಪಾರ್ಕ್ ಸ್ಥಾಪನೆ

43 (254) ಶ್ರೀ ಸದಾನಂದ ಗೌಡ ಡಿ ವಿ (ಪುತ್ತೂರು) ಮಾನ್ಯ ರೇಷ್ಮೆ, ಜವಳಿ ಹಾಗೂ ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಮತ್ತು ನಾಗರೀಕ ವಿಮಾನಯಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಸಿದ್ದ ಉಡುಪುಗಳ ಪಾರ್ಕ್ ಸ್ಥಾಪಿಸುವ ವಿಚಾರ ಸರ್ಕಾರದ ಮುಂದಿದೆಯೇ

ಆ) ಇದ್ದಲ್ಲಿ ಯಾವ ಕ್ರಮ ಕೈಗೊಳ್ಳಲಾಗಿದೆ ಹಾಗೂ ಇದರ ಉದ್ದೇಶಗಳೇನು, ಇದಕ್ಕೆ ತಗಲುವ ವೆಚ್ಚವೆಷ್ಟು ಎಲ್ಲಿ ಸ್ಥಾಪಿಸಲು ನಿರ್ಧರಿಸಲಾಗಿದೆ

ಇ) ಸಿದ್ಧ ಉಡುಪುಗಳ ಪಾರ್ಕ್ ತೆರೆಯಲು ರಾಜ್ಯ ಮುಂದೆ ಬಂದಲ್ಲಿ ಇದಕ್ಕೆ ಕೇಂದ್ರ ಸರ್ಕಾರ ಆರ್ಥಿಕ ನೆರವು ನೀಡುವುದೇ ಎಷ್ಟು ನೆರವು ಒದಗಿಸಲಾಗುತ್ತದೆ

ಈ) ಈ ಆರ್ಥಿಕ ನೆರವು ಪಡೆಯುವ ನಿಟ್ಟಿನಲ್ಲಿ ರಾಜ್ಯ ಸರಕಾರ ಕೈಗೊಂಡ ಕ್ರಮಗಳೇನು

ಉ) ಕೈಗೊಳ್ಳದಿದ್ದಲ್ಲಿ ಕಾರಣಗಳೇನು?

ಶ್ರೀ ಹೆಚ್ ಎಂ ರೇವಣ್ಣ (ರೇಷ್ಮೆ, ಜವಳಿ ಹಾಗೂ ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಮತ್ತು ನಾಗರೀಕ ವಿಮಾನಯಾನ ಸಚಿವರು)

ಅ) ಹೌದು